# ವೈದೇಹಿಯವರ ಶಕುಂತಲೆ ಎಂಬ ಎಚ್ಚರ

**ಶೋಭಾರಾಣಿ ಎನ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

**Received:** 01-08-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13870784**

## ABSTRACT:

ಶಕುಂತಲೆಯ ಕಥೆ ಮಹಾಭಾರತದ ಶಾಕುಂತಲೋಪಾಖ್ಯಾನದ ಕಾಲದಿಂದಲೂ ಭಾರತದ ಎಲ್ಲ ಭಾಷೆಗಳ ಕವಿಗಳನ್ನು ಆಕರ್ಷಿಸಿದೆ. ಸಂಸ್ಕೃತದ ಕವಿ ಕಾಳಿದಾಸನಂತೂ "ಅಭಿಜ್ಞಾನ ಶಾಕುಂತಲ"ವನ್ನೇ ಬರೆದ. ಶಕುಂತಲೆಯ ಮುಗ್ಧತೆ, ದುಷ್ಯಂತ–ಶಕುಂತಲೆಯರ ಪ್ರೇಮ, ವಿವಾಹ, ವಿಯೋಗ ಮತ್ತು ಮರು ಸಮಾಗಮಗಳನ್ನು ಕಾವ್ಯಾತ್ಮಕವಾಗಿಸಿ ರಮ್ಯ ನಾಟಕದ ಇತಿಹಾಸದಲ್ಲಿ ಶಕುಂತಲೆಯ ಕಥೆಯನ್ನು ಅಜರಾಮರಗೊಳಿಸಿದ. ಇದಕ್ಕೆ ಕಾರಣ ಹಲವು. ಶಾಕುಂತಲದ ಕಥೆಯಲ್ಲಿರುವ ರಮ್ಯತೆ, ಅದರ ವಸ್ತು ವಿಸ್ತಾರ, ಅಭಿಜಾತ ಗುಣಗಳು, ವಿಧಿವಾದ ಇತ್ಯಾದಿಗಳು ಒಂದು ಕಡೆಯಾದರೆ; ರಾಜಪ್ರಭುತ್ವ, ಸಿಂಹಾಸನ, ವಾರಸುದಾರಿಕೆಯ ಹಕ್ಕು–ಹಂಬಲಗಳು ಮತ್ತೊಂದು ಕಡೆ ನಿಂತು ಹಿಂದಿನ ಕವಿಗಳನ್ನು ಪ್ರೇರೇಪಿಸಿದೆ. ಹಾಗೆಯೇ ಕಥೆ ಹಳೆಯದಾದರೂ ಅದರೊಳಗೆ ಹುದುಗಿರುವ ಸತ್ವ ಇಂದಿನ ಲೇಖಕರನ್ನೂ ಚಿಂತನೆಗೆ ಹಚ್ಚಿದೆ. ಹೀಗೆ ಚಿಂತನೆಗೆ ತೊಡಗಿದ ಲೇಖಕರು ಕಥೆಯನ್ನು ವೈಚಾರಿಕತೆಯ, ನೈತಿಕತೆಯ ಒರೆಗೆ ಹಚ್ಚುವ ಪ್ರಯತ್ನ ಮಾಡಿದ್ದಾರೆ ಮತ್ತು ಪುರಾಣದ ಚಿಪ್ಪಿನಲ್ಲಿ ಅಂತರ್ಗತವಾಗಿರುವ ಅವಿತಿಟ್ಟ ಸತ್ಯಗಳ ಶೋಧನೆಗೆ ತೊಡಗಿದ್ದಾರೆ. ಇಂಥ ಒಂದು ಪ್ರಯತ್ನ ವೈದೇಹಿಯವರ "ಶಕುಂತಲೆಯೊಡನೆ ಕಳೆದ ಅಪರಾಹ್ನ" ಕಥೆಯಲ್ಲಿದೆ. ಪಿತೃಪ್ರಾಧಾನ್ಯತೆಯ, ರಾಜಪ್ರಭುತ್ವದ ಕೋರೈಸುವ ಬೆಳಕಿನಲ್ಲಿ ಕಳೆದು ಹೋದ ಶಕುಂತಲೆಯನ್ನು ಹುಡುಕುವ ಪ್ರಯತ್ನ ಇಲ್ಲಿನದು. ಇದನ್ನು ವೈದೇಹಿಯವರು ನಿರ್ವಹಿಸಿರುವ ರೀತಿಯನ್ನು ಕಂಡುಕೊಳ್ಳುವ ಮತ್ತು ಎಲ್ಲ ಹೆಣ್ಣುಗಳ ಪ್ರತಿನಿಧಿಯಾಗಿ ಶಕುಂತಲೆಯ ಪಾತ್ರವನ್ನು ಗ್ರಹಿಸುವ ಉದ್ದೇಶ ಪ್ರಸ್ತುತ ಲೇಖನದ ಹಿಂದಿದೆ.

## KEYWORDS:

ಶಾಕುಂತಲೋಪಾಖ್ಯಾನ, ಅಭಿಜ್ಞಾನ ಶಾಕುಂತಲ, ಶಕುಂತಲೆಯೊಡನೆ ಕಳೆದ ಅಪರಾಹ್ನ, ಪುರುಷ ಲಂಪಟತ್ವ, ವಿಸ್ಮರಣೆ–ಎಚ್ಚರ.

ಅಪರಾಹ್ನ ಎಂಬುದು ಸಾಂಪ್ರದಾಯಿಕ ಕೃಷಿ ಸಮಾಜ ವ್ಯವಸ್ಥೆಯ ಹೆಣ್ಣಿಗೆ ಬಿಡುವಿನ ವೇಳೆ. ಈ ಅಪರಾಹ್ನದ ಬಿಸಿಲಿಗೆ ನೆನಪುಗಳನ್ನು ಬಡಿದೆಬ್ಬಿಸುವ, ಕಾಮನೆಗಳನ್ನು ಕೆರಳಿಸುವ ವಿಚಿತ್ರ ಶಕ್ತಿಯಿದೆ. ಇಲ್ಲಿ ಹೆಣ್ಣು ಕೇವಲ ತಾನೇ ತಾನಾಗಿ ತನ್ನ ಬಗ್ಗೆ ಆಲೋಚಿಸಲು ಇರುವ ಖಾಸಗಿ ಸಮಯ ಈ ಗಳಿಗೆಗಳು. ಇಂಥದೊಂದು ಗಳಿಗೆಯಲ್ಲಿ ವೈದೇಹಿಯವರ ಶಕುಂತಲೆ ತನ್ನ ಬದುಕಿನ ಸಿಂಹಾವಲೋಕನಕ್ಕೆ ತೊಡಗಿದ್ದಾಳೆ.

ಶಕುಂತಲೆ ಮುಗ್ಧೆ ನಿಜ. ಆದರೆ ಅಬೋಧ ಬಾಲೆಯಲ್ಲ. ಮದುವೆಯ ವಯಸ್ಸು ಸಮೀಪಿಸಿದವಳು, ದಾಂಪತ್ಯದ ಕನಸುಗಳನ್ನು ಹೊತ್ತವಳು, ಎಸ್.ವಿ. ರಂಗಣ್ಣನವರು ಗುರುತಿಸುವಂತೆ ಕಾಳಿದಾಸನ ಶಕುಂತಲೆಯ ವಯಸ್ಸು "ಹದಿನೆಂಟಕ್ಕೆ ಮೀರಿ ಇಪ್ಪತ್ತರ ಒಳಗಿನದೆಂದು ನನ್ನ ಭಾವನೆ. ಅಶಿಕ್ಷಿತ ಪಟುತ್ವದ ಜೊತೆಗೆ ಕಣ್ವಾಶ್ರಮದ ಕೆಲಸ ಕಾರ್ಯಗಳಿಂದ ಫಲಕಾರಿಯಾದ 'ಶಿಕ್ಷಣ' ವನ್ನು ಆಗಲೇ ಪಡೆದಿದ್ದಾಳೆ. ಮೃಗಶಾಬದಂತೆ ಏನೂ ಅರಿಯದ ಕಿಶೋರಿಯಲ್ಲ ಅವಳು. ಯುಕ್ತಾಯುಕ್ತತೆಯನ್ನು ವಿವೇಚಿಸಬಲ್ಲ ಯುವತಿ."[1] ಇಂಥ ಶಕುಂತಲೆಯ ಕಥೆಗೆ ಮರೆವಿನ ಲೇಪವನ್ನು ಹೆಚ್ಚಾಗಿಯೇ ಬಳಿದು ಶಾಪಗೀಪ ಇತ್ಯಾದಿಗಳನ್ನೆಲ್ಲಾ ಅಡ್ಡ ಇಟ್ಟು ಪುರುಷ ಲಂಪಟತ್ವವನ್ನು ಮುಚ್ಚಿಡಲು ಹವಣಿಸಿದ ಕವಿ ಕಾಳಿದಾಸ ದುಷ್ಯಂತನ ವರ್ತನೆಗೆ ಕಾರಣ ಸೃಷ್ಟಿಸಿದನೇ ಹೊರತು ಶಕುಂತಲೆಯ ಹೃದಯಕ್ಕೆ ಭಾಷ್ಯ ಬರೆಯಲಿಲ್ಲ.

ಕಾಳಿದಾಸನಲ್ಲಿ ಆಕೆ ನಾಗರಿಕತೆಯ ಸಂಪರ್ಕವೇ ಇಲ್ಲದ ಅರಣ್ಯವಾಸಿ. ಆತನ ದೃಷ್ಟಿಯೆಲ್ಲಾ ಇಬ್ಬರು ಪ್ರೇಮಿಗಳನ್ನು ಸೇರಿಸಿ, ಬೇರ್ಪಡಿಸಿ, ಮರು ಸಮಾಗಮಗೊಳಿಸುವ ಕಡೆಗಿದೆ. ಆ ಮೂಲಕ ಪ್ರೇಮದ ಅಜರಾಮರತೆಯನ್ನು ಸಾರುವುದರಲ್ಲಿದೆ. ತಪೋವನದ ಪ್ರಫುಲ್ಲಿತ, ಸುಕೋಮಲ ಕನ್ಯೆಯನ್ನಾಗಿ ಶಕುಂತಲೆಯನ್ನು ಚಿತ್ರಿಸಿರುವ ಕಾಳಿದಾಸ ಅವಳೊಳಗಿನ ಸಂಕಟಕ್ಕೆ ದನಿಯಾಗಿಲ್ಲ. ವೈದೇಹಿಯವರ ಕಥೆ ಇಂಥ ವೇದನೆಗಳ ಎಳೆಗಳಿಗೆ ದನಿಗೊಟ್ಟಿದೆ. ನೋವು ಶಕುಂತಲೆಯ ಬದುಕಿನ ಸ್ಥಾಯಿಭಾವ. ಅವಳೊಳಗಿನ ಎಲ್ಲ ಎಚ್ಚರ ಇಂಥ ನೋವುಗಳೊಳಗಿಂದಲೇ ಆವಿರ್ಭವಿಸಿವೆ. ಸಂಕಟ ನುಂಗುವುದನ್ನು ಆಕೆ ಕಲಿತದ್ದು ದುಷ್ಯಂತನ ನಿರಾಕರಣೆಯ ಸಂದರ್ಭದಿಂದಲ್ಲ. ಅದಕ್ಕೂ ಮೊದಲೇ ತನ್ನ ಬೆಳವಣಿಗೆಯ ಹಂತಗಳಲ್ಲೇ ಆಕೆ ಇಂಥದ್ದೊಂದು ಮನಃಸ್ಥಿತಿಯ ಪೂರ್ವಸಿದ್ಧತೆಯಲ್ಲಿ ತೊಡಗಿರಬೇಕು. ರಾಜರ್ಷಿ ವಿಶ್ವಾಮಿತ್ರ ಮತ್ತು ಅಪ್ಸರೆ ಮೇನಕೆಯರ ಮಗಳಾಗಿ ಜನಿಸಿ ಕಣ್ವರ ಕೃಪಾಕಟಾಕ್ಷದಲ್ಲಿ ಬೆಳೆಯಬೇಕಾದ ಅನಿವಾರ್ಯತೆ; ಕಣ್ವರ ಪ್ರೀತಿ ಎಷ್ಟೇ ಇದ್ದರೂ ತನ್ನನ್ನು ತ್ಯಜಿಸಿ ಹೋದ ತಂದೆ–ತಾಯಿಗಳ ಮೇಲಿನ ಜುಗುಪ್ಸೆ, ವೇದನೆ ಎಲ್ಲವೂ ಅವಳನ್ನು ಸೂಕ್ಷ್ಮ ವಿವೇಚನೆಯ ಪ್ರತಿಮೆಯಾಗಿ ಕೆತ್ತಿವೆ. ತನ್ನ

ಬಾಲ್ಯದ ಮಾನಸಿಕ ಕ್ಲೇಷೆಗಳಿಗೆ ಕಾರಣವಾದ ತಂದೆ–ತಾಯಿಯರ ವರ್ತನೆಯೇ ಮುಂದೆ ತಾಯಿ ಮೇನಕೆಯ ಬದುಕು ತನ್ನಲ್ಲಿ ಮರುಕಳಿಸಿದಾಗಲೂ ತನ್ನ ಮಗುವನ್ನು ಕಾಡಿನಲ್ಲಿ ಬಿಡಲಾರೆ ಎಂಬ ಆಕೆಯ ದೃಢನಿರ್ಧಾರಕ್ಕೆ ಪ್ರೇರಣೆಯಾಗಿದ್ದಿರಬೇಕು. ಆಕೆಯಲ್ಲಿ ಹರಿಯುತ್ತಿರುವುದು ಮೇನಕೆಯ ರಕ್ತ ಮಾತ್ರವಲ್ಲ, ಅದರ ಕಣಕಣದಲ್ಲಿ ಕಣ್ವರ ಸಂಸ್ಕಾರವಿದೆ.

ಶಕುಂತಲೆ–ದುಷ್ಯಂತರ ಪ್ರೇಮಾಂಕುರದ ಅಂಕದಿಂದ ಹಿಡಿದು ದೂರ್ವಾಸಾಗಮನದವರೆಗೂ ಶಕುಂತಲೆಯನ್ನು ನಿಷ್ಕಲ್ಮಷ, ಶುದ್ಧಾಂತರ್ಯದ, ವಿವೇಕ, ಸ್ಥೈರಣೆಗಳ, ನಿರ್ದುಷ್ಟ ನಡತೆಯ ಯುವತಿಯನ್ನಾಗಿ ಚಿತ್ರಿಸಿರುವ ಕಾಳಿದಾಸ ನಂತರದಲ್ಲಿ ದೂರ್ವಾಸರ ಶಾಪ, ಅಭಿಜ್ಞಾನ ಉಂಗುರ, ಅದರ ನಷ್ಟ ಮೊದಲಾದ ಸಂಗತಿಗಳನ್ನು ಏಕೆ ತಂದಿಟ್ಟಿದ್ದಾನೆ? ಈ ಮೂಲಕ ಏನನ್ನು ಸಾಧಿಸಹೊರಟಿದ್ದಾನೆ? ಎಂಬ ಪ್ರಶ್ನೆ ಏಳುತ್ತದೆ. ಮೊದಲು ಶಾಪಗೊಟ್ಟು ನಂತರ ದಯೆ ಬೀರಿ ಹೋದ ಮುನಿಯಾಗಲೀ, ಉಂಗುರ ಕಳೆದು ಹೋಗುವುದಾಗಲೀ ದುಷ್ಯಂತನ ಮರೆವಿಗೆ ಮತ್ತು ಶಕುಂತಲೆಯ ಸಂಕಟಕ್ಕೆ ಕಾರಣ ಎಂಬುದನ್ನು ವಾಸ್ತವದ ಮನಸ್ಸು ಒಪ್ಪಲಾರದು. ಏಕೆಂದರೆ ದುರ್ವಾಸರಂಥ ಮಹಾಜ್ಞಾನಿ ತನ್ನ ತೊಡೆಯ ಮೇಲೇ ಆಡಿ ಬೆಳೆದ ಶಕುಂತಲೆಗೆ ಪೂರ್ವಾಪರ ವಿವೇಚಿಸಿದೆ ಶಾಪಕೊಡಲಾರರು. ಇನ್ನು ಅಭಿಜ್ಞಾನ ಉಂಗುರದ ಪ್ರಸಂಗವಂತೂ ವಾಸ್ತವಿಕತೆಗೆ ದೂರ. ಈ ಇಡೀ ಪ್ರಸಂಗವೇ ವೈದೇಹಿಯವರು ಗುರುತಿಸುವಂತೆ “ಎಲ್ಲ ಜಾಣ ಮರೆವಿನ ಮಲ್ಲರನ್ನೂ ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿರಿಸುವ, ಪುರುಷ ಕಟ್ಟಿದ ವಿಸ್ಮರಣೆಯ ಕತೆ.”[2]

ಶಕುಂತಲೆ ತಪೋವನದಲ್ಲಿ ಬೆಳೆದವಳು. ಆಕೆಯ ಪ್ರೀತಿ–ಪ್ರಣಯದ ಅನುಭವಪೂರ್ಣತೆಗೆ ಒದಗಿದವನು ದುಷ್ಯಂತ. ಆದರೆ ದುಷ್ಯಂತನಿಗಾದರೋ ಆತನ ಅನುಭವದ ಪ್ರವಾಹದಲ್ಲಿ ಈಕೆಯೊಂದು ಸಣ್ಣ ತೊರೆ. “ಹಿಮಾಲಯಕ್ಕೆಂದೂ ಒಂದೇ ಕಣಿವೆಯಲ್ಲ. ಹಿಮಾಲಯಕ್ಕೆಂದೂ ಕಣಿವೆಗಳು ಕಾಣುವುದಿಲ್ಲ”[3] ಎಂಬ ಅರಿವು ಇಲ್ಲಿನ ಶಕುಂತಲೆಗೆ ನಿಚ್ಚಳವಾಗಿದೆ. ಹಾಗಾಗಿಯೇ ತನ್ನ ನಿರ್ಮಲ ಪ್ರೇಮದ ಸತ್ಯತೆಗೆ ಪ್ರಮಾಣ ಕೇಳುತ್ತಿರುವ ಪುರುಷನೆದುರು ಸ್ವಾಭಿಮಾನಿಯಾದ ಶಕುಂತಲೆ ಸಿಡಿದು ನಿಲ್ಲುತ್ತಾಳೆ. ಉಂಗುರ ಬೆರಳಿನಲ್ಲಿದ್ದರೂ ಕಳೆದು ಹೋಯಿತೆಂದು ಹೇಳುತ್ತಾಳೆ. ಯಾವ ದುಷ್ಯಂತನ ವ್ಯಕ್ತಿತ್ವವನ್ನು ಕಾಳಿದಾಸ “ಆರ್ಯಂ ಮನಃ” ಎಂದು ಕರೆದನೋ ಅದೇ ರಾಜನನ್ನು ಶಕುಂತಲೆ ಎಲ್ಲರೆದುರೇ ‘ಅನಾರ್ಯ’ ಎನ್ನುವ ಮೂಲಕ ಆರ್ಯತ್ವದ ಆದರ್ಶಕ್ಕೆ ಹೊಸ ವ್ಯಾಖ್ಯಾನ ನೀಡುತ್ತಾಳೆ.

ಇಲ್ಲಿಯವರೆಗೆ ಮಾನವ ಸಹಜ ರಾಗ–ದ್ವೇಷ, ದ್ವಂದ್ವ, ವೇದನೆಗಳೊಂದಿಗೇ ಸಾಗುತ್ತಿದ್ದ ಶುದ್ಧ ಮನುಷ್ಯ ಪಾತ್ರವಾಗಿದ್ದ ಶಕುಂತಲೆ ಇಲ್ಲಿಂದ ಮುಂದೆ ನಿಸರ್ಗಕ್ಕೆ

ಹೆಚ್ಚು ಹತ್ತಿರಳಾಗುತ್ತಾ ಹೋಗುತ್ತಾಳೆ. ಪ್ರಕೃತಿ ಹೆಣ್ಣಿಗೆ ಮಾತ್ರ ನೀಡಿರುವ ತಾಯ್ತನದ ಅನುಭವವನ್ನು ಇಡಿಯಾಗಿ ಅನುಭವಿಸುವುದರ ಮೂಲಕ ದುಷ್ಯಂತನೊಂದಿಗೆ ಕಟ್ಟಿಕೊಳ್ಳಬಹುದಾಗಿದ್ದ ಬದುಕಿನ ಅನುಭವಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುತ್ತಾಳೆ. ದುಷ್ಯಂತನಿಗೆ ಒದಗದ, ಒದಗಲು ಸಾಧ್ಯವೇ ಇಲ್ಲದ ಅನುಭವ ಪ್ರಪಂಚದಲ್ಲಿ ಬದುಕುವುದನ್ನು ಕಲಿಯುತ್ತಲೇ ಪಕ್ವವಾಗುತ್ತಾಳೆ. ಆ ಮೂಲಕ ದುಷ್ಯಂತ, ವಿಶ್ವಾಮಿತ್ರರಂಥ ಪುರುಷರು ಪ್ರತಿನಿಧಿಸುವ ಸಮಾಜಕ್ಕೂ, ಮೇನಕೆಯಂಥ ಸ್ತ್ರೀಯರು ಪ್ರತಿನಿಧಿಸುವ ಸಮಾಜಕ್ಕೂ ಎದುರಾಗಿ ನಿಂತು ತನ್ನ ಬಾಳಿನ ರೀತಿಯನ್ನು ಉತ್ತರವಾಗಿ ನೀಡುತ್ತಾಳೆ. "Single Parenting" ನ ಕಲ್ಪನೆ ಬಹು ಅರ್ಥಸಾಧ್ಯತೆಗಳನ್ನು ಪಡೆಯುವುದು ಈ ನೆಲೆಯಲ್ಲಿಯೇ ಎನಿಸುತ್ತದೆ.

ಸಾಮಾನ್ಯವಾಗಿ ಪೌರಾಣಿಕ ಪಾತ್ರವೊಂದನ್ನು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಪುನರ್‌ನಿರ್ಮಿಸುವಾಗ ಅದು ಕಪ್ಪು ಬಿಳುಪಿನ ಚಿತ್ರಣದ ಮಾದರಿಯಾಗಿ, ಪುರುಷ ದ್ವೇಷದ ತೆಳು ಲೇಪವನ್ನಾದರೂ ಹೊತ್ತು ಹೊರಬರುತ್ತದೆ. ಆದರೆ ವೈದೇಹಿಯವರ ಕಥೆ ವಿಭಿನ್ನವೂ ವಿಶಿಷ್ಟವೂ ಆದ ನೆಲೆಯಲ್ಲಿ ನಿಲ್ಲುತ್ತದೆ. ಕಥೆ ಶಕುಂತಲೆಯ ಪಾತ್ರವನ್ನು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ನೋಡುತ್ತಾದರೂ ಇಲ್ಲಿ ದುಷ್ಯಂತ ಖಳನಾಯಕನಾಗುವುದಿಲ್ಲ. ಇಲ್ಲಿನ ಶಕುಂತಲೆಗೆ ದುಷ್ಯಂತನ ಬಗ್ಗೆ ಕಹಿಯಿದ್ದರೂ ದ್ವೇಷವಿಲ್ಲ. ಆತನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ತಾನು "ಕಾಳಿದಾಸನ ಶಕುಂತಲೆ ಎಂಬ ಮುಗ್ಧ ಹೆಣ್ಣಿನ" ಪರ ವಕೀಲಳಂತೆಯೂ ಮಾತನಾಡುವುದಿಲ್ಲ. ಈ ವೇಳೆಗಾಗಲೇ ಪ್ರಖರವಾದ ಬೌದ್ಧಿಕ ಎಚ್ಚರವನ್ನು ಅರ್ಜಿಸಿರುವ ಶಕುಂತಲೆ ಇಡೀ ಕಥೆಯಲ್ಲಿ ವಿಭಿನ್ನ ಮನುಷ್ಯ ಸ್ವಭಾವಗಳನ್ನು ಪದರ-ಪದರವಾಗಿ ತೆರೆದಿಡುತ್ತಾಳೆ. ದುಷ್ಯಂತನ ದ್ವಂದ್ವವನ್ನು ಪ್ರತಿ ಘಟನೆಯಲ್ಲೂ ಸೂಕ್ಷ್ಮವಾಗಿ ಗುರುತಿಸುವ ಪ್ರಯತ್ನ ಮಾಡುತ್ತಾಳೆ. ಪರಿಶುದ್ಧವಾಗಿ ಪ್ರೇಮಿಸುವ ಅನುಭವ ನೀಡಿದ್ದಕ್ಕಾಗಿ ಆತನಿಗೆ ಆಕೆ ಕೃತಜ್ಞಳೂ ಆಗಿದ್ದಾಳೆ.

ಜಾಣ ಮರೆವಿನ ನಟನಾದ ದುಷ್ಯಂತ ಶಕುಂತಲೆಯ ಕಣ್ಣಿಗೆ ಪ್ರೀತಿ, ಪ್ರಣಯ, ದ್ವಂದ್ವ, ಪಾಪಪ್ರಜ್ಞೆ, ಸಾಮಾಜಿಕ ಬಂಧನ ಎಲ್ಲವನ್ನೂ ಒಳಗೊಂಡ ಅಪ್ಪಟ ಮನುಷ್ಯನಾಗಿ ಕಾಣುತ್ತಾನೆ. ಈ ಅಪ್ಪಟ ಮನುಷ್ಯನೊಳಗಿನ ಭಿನ್ನ ಸ್ವಭಾವಗಳ ಎಳೆಗಳನ್ನು ಸೂಕ್ಷ್ಮವಾಗಿ ಬಿಡಿಸಿ ನೋಡದ ಹರೆಯದ ಶಕುಂತಲೆ ಭ್ರಮೆಯಲ್ಲಿ ಮುಳುಗಿರುತ್ತಾಳೆ. ಈ ಹಂತದಲ್ಲಿ ತನ್ನಂತೆಯೇ ಆತನೂ ಪರಿಶುದ್ಧ ಪ್ರೀತಿಯನ್ನು ವಿನಿಮಯ ಮಾಡಿಕೊಳ್ಳುತ್ತಿರುವನೇ? ಎಂಬುದನ್ನು ಪ್ರಶ್ನಿಸಿಕೊಳ್ಳಲಾರದಷ್ಟು ಭ್ರಮಿತಳಾಗಿದ್ದಾಳೆ. ಕಥೆ ಮುಂದುವರಿದಂತೆ ಹರೆಯದ ಯುವತಿ ಮಧ್ಯ ವಯಸ್ಸಿನ ಮಹಿಳೆಯಾಗಿದ್ದಾಳೆ. ಈ ಘಟ್ಟದಲ್ಲಿ ನಿಂತು ತನ್ನ ಬದುಕನ್ನು ಅವಲೋಕಿಸುವ ಶಕುಂತಲೆ ತನ್ನ ಬದುಕಿನಲ್ಲಿ ಎದ್ದ ಪ್ರತಿಪ್ರಶ್ನೆಗೂ ತಾನೇ ಉತ್ತರ ದೊರಕಿಸಿಕೊಳ್ಳುತ್ತಾ

ಸಾಗುತ್ತಾಳೆ, ಪ್ರೌಢಳಾಗುತ್ತಾಳೆ. ದುಷ್ಯಂತನ ನಡವಳಿಕೆಗಳನ್ನು ಪುನರ್ ಅವಲೋಕನ ಮಾಡುತ್ತಾ ಆತನ ತಲ್ಲಣಗಳು, ದ್ವಂದ್ವಗಳು, ಅವನೊಳಗಿನ ಒಳಿತು–ಕೆಡಕುಗಳನ್ನು ಗ್ರಹಿಸುತ್ತಾಳೆ. ಪರಿಪೂರ್ಣ ವ್ಯಕ್ತಿತ್ವದ ಅನ್ವೇಷಣೆಯಲ್ಲಿ ತೊಡಗುತ್ತಾಳೆ? ಹೀಗೆ ಅನ್ವೇಷಿಸುತ್ತಾ ತಾನೇ ಒಂದು ಪೂರ್ಣ ವ್ಯಕ್ತಿತ್ವವಾಗಿ ಮಾರ್ಪಡುತ್ತಾಳೆ. ಪರಿಶುದ್ಧವಾಗಿ ಪ್ರೀತಿಸುವುದೊಂದನ್ನೇ ಗುಣವನ್ನಾಗಿಸಿಕೊಂಡ, ಕೊಡುವುದಷ್ಟನ್ನೇ ತನ್ನ ಕರ್ತವ್ಯವೆಂದು ಭಾವಿಸುವ ಈಕೆ ಪಡೆದುದರ ಬಗ್ಗೆ, ಪಡೆಯಲಾರದರ ಬಗ್ಗೆ ಚಿಂತಿಸುತ್ತಾ ಚಿತ್ತವನ್ನು ಹುತ್ತಗಟ್ಟಿಸಿಕೊಳ್ಳುವುದಿಲ್ಲ. ತನ್ನ ದಾಂಪತ್ಯ ನಿಷ್ಠೆಗೆ ಮತ್ತೆ ಮತ್ತೆ ತನ್ನಿಂದ ಸಮರ್ಥನೆ ಬಯಸುವ ರಾಮನನ್ನು ತಿರಸ್ಕರಿಸಿ ಭೂಮಿಯೊಳಗೆ ಹೊರಡುವ ಸೀತೆ ಮತ್ತು ತನ್ನ ಪ್ರೇಮದ ಅಸ್ತಿತ್ವವನ್ನೆ ದೂರುತ್ತಾ ತನ್ನ ಸ್ವಾಭಿಮಾನಕ್ಕೆ ಬಲವಾದ ಪೆಟ್ಟುಕೊಟ್ಟ ದುಷ್ಯಂತನೊಡನೆ ತೆರಳಲು ನಿರಾಕರಿಸಿ ಮಾರೀಚಾಶ್ರಮದಲ್ಲೇ ಉಳಿದ ಶಕುಂತಲೆ– ಈ ಇಬ್ಬರೂ ತಮ್ಮ ವ್ಯಕ್ತಿತ್ವದ ಅನ್ವೇಷಣೆಯಲ್ಲಿ ತೊಡಗಿದ ಮಾದರಿ ಪಾತ್ರಗಳೇ.

ನಮ್ಮ ಬಹುತೇಕ ಕೃತಿಗಳು ಪುರುಷನೊಂದಿಗೆ ಹೆಣ್ಣಿಗಿರುವ ಸಂಬಂಧದ ವಿವಿಧ ಮಾದರಿಗಳನ್ನು ಚಿತ್ರಿಸಿವೆ. (ಸಹಬಾಳ್ವೆಯ, ಸಂಘರ್ಷದ, ಪ್ರತಿಭಟನೆಯ, ಅನುಸಂಧಾನದ ಮಾದರಿಗಳು ಇತ್ಯಾದಿ). ಆದರೆ ಜೀವನದಲ್ಲಿ ಸ್ವತಂತ್ರವಾಗಿ ಚಿಂತನಶೀಲಳಾದ ಅಥವಾ ಅನ್ವೇಷಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಮಹಿಳೆಯ ಚಿತ್ರಣ ಅತಿವಿರಳ. ಇಂತಹ ವಿರಳ ಕೃತಿಗಳಲ್ಲಿ ಒಂದು "ವೈದೇಹಿಯವರ ಶಕುಂತಲೆಯೊಡನೆ ಒಂದು ಅಪರಾಹ್ನ." ಇಲ್ಲಿನ ಶಕುಂತಲೆ ತನ್ನ ಪ್ರೀತಿಯ ಉಗಮಕ್ಕಾಗಲೀ, ಅದರಿಂದ ಉಂಟಾದ ಬದುಕಿನ ಸ್ಥಿತ್ಯಂತರಗಳಿಗಾಗಲೀ ಕೇವಲ ದುಷ್ಯಂತನನ್ನು ಮಾತ್ರ ಹೊಣೆ ಮಾಡುವುದಿಲ್ಲ. ಆಯ್ಕೆಯ ಎಲ್ಲ ಸ್ವಾತಂತ್ರ್ಯ ಪಡೆದಿದ್ದ ಆಕೆ ಈ ಎಲ್ಲ ಘಟನೆಗಳಿಗೂ ತನ್ನನ್ನೇ ಹೊಣೆ ಮಾಡಿಕೊಳ್ಳುತ್ತಾ "ಪರಸ್ಪರ ಅನಿವಾರ್ಯರಾಗುವವರೆಗೂ ಕೂಡುವುದೂ ತಪ್ಪು"[4] ಎಂಬ ನಿಲುವಿಗೆ ಬಂದು ತಲುಪುತ್ತಾಳೆ. ತನ್ನ ಪ್ರೀತಿ ಮತ್ತು ಅನಿವಾರ್ಯತೆ ಕೇವಲ ತನ್ನದೇ ಎಂಬ ನಿರ್ಧಾರಕ್ಕೆ ಬದ್ಧಳಾಗುತ್ತಾಳೆ.

ಕೊನೆಗೂ "ಈಕೆ ಯಾರು? ಪ್ರೇಮಿಯೇ?, ವಿರಹಿಣಿಯೇ? ತಪಸ್ವಿನಿಯೇ? ಅಥವಾ ಎಲ್ಲವೂ ಆಗಿ ಎಲ್ಲವನ್ನೂ ಕಳೆದು ಚೊಕ್ಕವಾದ ತಾಜಾ ಪ್ರಕೃತಿಯೇ"[5] ಎಂಬ ಪ್ರಶ್ನೆಯನ್ನು ಎತ್ತುವ ಕಥೆ ಉತ್ತರವನ್ನು ಅಂತರ್ಗತಗೊಳಿಸಿಕೊಂಡಿದೆ. ಬದುಕಿನ ಎಲ್ಲ ಏರಿಳಿತಗಳ ಕೊನೆಗೆ ಆಕೆ ಶುದ್ಧ ಪ್ರಕೃತಿಯಾಗಿ ನಿಂತಿದ್ದಾಳೆ. ಪುರುಷ ಸಮಾಜ ನಿರ್ಮಿತ ಸಂಸ್ಕೃತಿಯ ಎಲ್ಲ ಆವರಣಗಳನ್ನು ಕಳಚಿಕೊಳ್ಳುತ್ತಾ ತಾಜಾ ಪ್ರಕೃತಿಯಾಗುವುದರಲ್ಲಿ ತನ್ನ ಸ್ತ್ರೀತ್ವದ ಸಾರ್ಥಕತೆ ಪಡೆದಿದ್ದಾಳೆ, ವೈದೇಹಿಯವರ ಶಕುಂತಲೆ.

## ಅಡಿ ಟಿಪ್ಪಣಿಗಳು:

1. ರಂಗಣ್ಣ ಎಸ್. ವಿ. (2001). ಕಾಳಿದಾಸನ ನಾಟಕಗಳ ವಿಮರ್ಶೆ. ಎಸ್. ಆರ್.ಶಿವರಾಮ್ ಪ್ರಕಾಶನ. ಬೆಂಗಳೂರು. ಪು.ಸಂ. 359
2. ವೈದೇಹಿ. (2006). ವೈದೇಹಿಯವರ ಆಯ್ದ ಕಥೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು. ಪು.ಸಂ. 34
3. ವೈದೇಹಿ. (2006). ವೈದೇಹಿಯವರ ಆಯ್ದ ಕಥೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು. ಪು.ಸಂ. 28
4. ವೈದೇಹಿ. (2006). ವೈದೇಹಿಯವರ ಆಯ್ದ ಕಥೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು. ಪು.ಸಂ. 38
5. ವೈದೇಹಿ. (2006). ವೈದೇಹಿಯವರ ಆಯ್ದ ಕಥೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು. ಪು.ಸಂ. 39

## ಪರಾಮರ್ಶನ ಕೃತಿಗಳು


1. ವೈದೇಹಿ. (2006). ವೈದೇಹಿಯವರ ಆಯ್ದ ಕಥೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು.
2. ಸುಮಿತ್ರಾಬಾಯಿ ಬಿ. ಎನ್. (2006). ಸ್ತ್ರೀವಾದ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
3. ಪ್ರಭಾವತಿ ಎಸ್. ವಿ. (2011). ಸ್ತ್ರೀವಾದದ ಪ್ರಸ್ತುತತೆ. ಚಾರುಮತಿ ಪ್ರಕಾಶನ. ಬೆಂಗಳೂರು.
4. ರಂಗಣ್ಣ ಎಸ್. ವಿ. (2001). ಕಾಳಿದಾಸನ ನಾಟಕಗಳ ವಿಮರ್ಶೆ. ಎಸ್. ಆರ್.ಶಿವರಾಮ್ ಪ್ರಕಾಶನ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.